ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 17/9/2020

## ನಿಜಾಮನ ಕಪಿಮುಷ್ಟಿಯಿಂದ ಬಿಡುಗಡೆಯಾಗಿ ಅರ್ಧ ಶತಮಾನ ಕಳೆದರೂ ಅಭಿವೃದ್ಧಿ ಮರೀಚಿಕೆ

# ಕಲ್ಯಾಣ ಕರ್ನಾಟಕ ಹೆಸರೊಂದೇ ಸಾಕೆ?

■ ದೇವಯ್ಯ ಗುತ್ತೇದಾರ್ ಕಲಬುರಗಿ
devayya.guttedar@timesgroup.com

ಕಲ್ಯಾಣ ಕರ್ನಾಟಕ ದಿನಾಚರಣೆ ಗುರುವಾರ ನಡೆಯಲಿದೆ. ಕಲಬುರಗಿಯಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಸಿಎಂ ಬಿ. ಎಸ್. ಯಡಿಯೂರಪ್ಪ ಪಾಲ್ಗೊಳ್ಳುತ್ತಿರುವುದರಿಂದ ಈ ಭಾಗದ ಬೇಡಿಕೆಗಳು ಗರಿಗೆದರಿವೆ.

ಕಲ್ಯಾಣ ಕರ್ನಾಟಕ ಭಾಗದ ಆರು ಜಿಲ್ಲೆಗಳಾದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳು ನಿಜಾಮನ ಕಪಿಮುಷ್ಟಿಯಿಂದ ಸ್ವಾತಂತ್ರ್ಯಗೊಂಡು ಇಂದಿಗೆ 52 ವಸಂತಗಳು ಕಳೆದರೂ ಅಭಿವೃದ್ಧಿ ತೆವಳುತ್ತ ಸಾಗಿದೆ. ಹಿಂದುಳಿಕೆ ಹಣೆಪಟ್ಟಿ ಕಳಚಿ ಹಾಕಲು ಸಿಎಂ ಹಲವು ಕೊಡುಗೆಗಳನ್ನು ಘೋಷಿಸಬಹುದು ಎಂದು ಜನರು ನಿರೀಕ್ಷೆ ಇಟ್ಟುಕೊಂಡಿದ್ದಾರೆ.

**ತಕ್ಷಣವೇ ಆಗಬೇಕಾಗಿದ್ದೇನು?:** ಕಲಬುರಗಿಗೆ ಮಂಜೂರಾಗಿರುವ ಎಸ್ಇ ಝೋನ್ ಜಾರಿಯಾಗಬೇಕು, ಇದು ಇಲ್ಲದಿದ್ದರೂ ಕೈಗಾರಿಕಾ ಕಾರಿಡಾರ್ ಸ್ಥಾಪನೆಯಾಗಬೇಕು ಕ-ಕ ಭಾಗದಲ್ಲಿ ಏಮ್ಸ್ ಸ್ಥಾಪಿಸಬೇಕು, ಸಂವಿಧಾನದ 371ಜೆ ಅಡಿ ತೆಲಂಗಾಣ-ವಿದರ್ಭಕ್ಕೆ ನೀಡಿದಂತೆ ಈ ಭಾಗಕ್ಕೂ ನೀಡಬೇಕು, ಮಂಜೂರಾಗಿರುವ ರೈಲ್ವೆ ಡಿವಿಷನ್ ಆರಂಭಕ್ಕೆ ಒತ್ತಾಯಿಸಬೇಕು, ಕೈಗಾರಿಕೆ ಸ್ಥಾಪಿಸಲು ಮುಂದೆ ಬರುವವರಿಗೆ ತೆರಿಗೆ ವಿನಾಯ್ತಿ ಸೇರಿದಂತೆ ಹಲವು ರಿಯಾಯ್ತಿ ನೀಡಬೇಕು ಎನ್ನುತ್ತಾರೆ ಉದ್ಯಮಿಗಳು.

**371ಜೆ ಸಮರ್ಪಕ ಜಾರಿಯಾಗಲಿ:** ಹಿಂದುಳಿದ ಹೋಗಲಾಡಿಸಲು ಸಂವಿಧಾನದ 371ಜೆ ಕಲಂಗೆ ತಿದ್ದುಪಡಿ ತರಲಾಗಿದೆ. ಆದರೆ ಇದರ ಜಾರಿಯಲ್ಲಿ ಹಲವು ಅಡೆತಡೆ ಬಂದಿವೆ. ಕ-ಕ ಹೊರತಾದ ಜಿಲ್ಲೆಗಳಲ್ಲಿ ಈ ಭಾಗದವರಿಗೆ ನೇಮಕಾತಿ, ಸರಕಾರಿ ನೌಕರರಿಗೆ ಬಡ್ತಿ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ಶೇ 8ರಷ್ಟು ಮೀಸಲಾತಿ ಸಿಗುತ್ತಿಲ್ಲ, ಇದಕ್ಕಾಗಿ ಬೆಂಗಳೂರಲ್ಲಿ ಇರುವ ಹೈಕ ಕೋಶವನ್ನು ಕಲಬುರಗಿಯಲ್ಲಿ ಸ್ಥಾಪಿಸಬೇಕು.

### ತೊಗರಿ ಮಂಡಳಿಗೆ ಬಲ ತುಂಬಲಿ

ಕಲ್ಯಾಣದ ಹೆಬ್ಬಾಗಿಲು ಎಂದೇ ಕರೆಯುವ ಕಲಬುರಗಿ ತೊಗರಿ ಕಣಜ. ಆದರೆ ತೊಗರಿ ಬೆಳೆಗಾರರ ಬದುಕು ಹಸನಾಗಿಲ್ಲ. ರಾಶಿ ಮಾಡುವ ಹೊತ್ತಲ್ಲೇ ದರ ಕುಸಿತವಾಗಿ ರೈತರು ಬೆಳೆದ ಉತ್ಪನ್ನಕ್ಕೆ ಬೆಲೆ ಸಿಗುತ್ತಿಲ್ಲ, ತೊಗರಿಗೆ ಜಿಐ ಮಾನ್ಯತೆ ಸಿಕ್ಕಿರುವುದರಿಂದ ಅದನ್ನು ಬ್ರ್ಯಾಂಡ್ ಆಗಿ ರೂಪಿಸಿ ರೈತರಿಗೆ ಲಾಭ ಆಗುವಂತೆ ಮಾಡಬೇಕು. ಇಲ್ಲಿರುವ ತೊಗರಿ ಅಭಿವೃದ್ಧಿ ಮಂಡಳಿ ಪುನಶ್ಚೇತನಗೊಳಿಸಬೇಕು. ಕೆಎಂಎಫ್ ಮಾದರಿಯಲ್ಲಿ ಇದನ್ನು ಪುನಾರಚಿಸಿದರೆ ತೊಗರಿ ಬೆಳೆಗಾರರಿಗೆ ಅನುಕೂಲವಾಗಲಿದೆ. . ಈಗ ಹೆಸರು, ಉದ್ದು ಕಟಾವು ಆಗಿ ಮಾರುಕಟ್ಟೆಗೆ ಬರುತ್ತಿದ್ದು, ದರ ಕುಸಿತವಾಗಿದೆ. ತಕ್ಷಣವೇ ಮಾರುಕಟ್ಟೆ ಪ್ರವೇಶಿಸಿ ಸರಕಾರ ಖರೀದಿ ಕೇಂದ್ರಗಳನ್ನು ಸ್ಥಾಪಿಸಬೇಕು.




● ಕಲ್ಯಾಣ ಕರ್ನಾಟಕದ ಪ್ರಗತಿಗೆ ಸರಕಾರ ಬದ್ಧವಾಗಿದೆ. ಕೊಟ್ಟಿರುವ ಭರವಸೆಗಳನ್ನು ಈಡೇರಿಸಲಾಗುವುದು.

-ಗೋವಿಂದ ಕಾರಜೋಳ ಡಿಸಿಎಂ, ಜಿಲ್ಲಾ ಉಸ್ತುವಾರಿ ಸಚಿವ, ಕಲಬುರಗಿ

ಅತಿ ಹಿಂದುಳಿದ ತಾಲೂಕುಗಳು

| ವಿಭಾಗ | ಅತ್ಯಂತ ಹಿಂದುಳಿದ ತಾಲೂಕುಗಳು |
|---|---|
| ಬೆಂಗಳೂರು | 11 |
| ಮೈಸೂರು | 02 |
| ಬೆಳಗಾವಿ | 05 |
| ಕಲಬುರಗಿ | 21 |

● ಕಳೆದ ವರ್ಷ ಸಿಎಂ ನೀಡಿದ ಭರವಸೆ ಈಡೇರಿಸಿಲ್ಲ. ವಚನಭ್ರಷ್ಟ ಸಿಎಂ ಎನಿಸಿಕೊಳ್ಳಬಾರದು. ಸಚಿವಾಲಯ ಸ್ಥಾಪನೆ, ಕಲ್ಯಾಣ ಕರ್ನಾಟಕ ವಿಶೇಷ ಕೋಶ, ಮೀಸಲಾತಿ ಜಾರಿ ಇವೆಲ್ಲವೂ ದುಡ್ಡಿಲ್ಲದೇ ಆಗುವ ಕೆಲಸಗಳು. ಇವುಗಳನ್ನು ಸರಕಾರ ಮೊದಲು ಮಾಡಿ ಮಾತು ಉಳಿಸಿಕೊಳ್ಳಲಿ.

-ಲಕ್ಷ್ಮಣ ದಸ್ತಿ ಅಧ್ಯಕ್ಷ, ಹೈ-ಕ ಹೋರಾಟ ಸಮಿತಿ, ಕಲಬುರಗಿ

### ನಿಂತ ನೀರಾದ ನೀರಾವರಿ ಯೋಜನೆಗಳು

ಕ-ಕ ಭಾಗದ ತುಂಗಭದ್ರಾ, ನಾರಾಯಣಪುರ ಜಲಾಶಯ ವ್ಯಾಪ್ತಿಯಲ್ಲಿ ನೀರಾವರಿ ಯಾಗಿದೆ. ಆದರೆ ಕಲಬುರಗಿ, ಬೀದರ್, ಯಾದಗಿರಿಯಲ್ಲಿ 70ರ ದಶಕದಲ್ಲಿ ನಿರ್ಮಾಣವಾಗಿರುವ ಬೆಣ್ಣೆತೊರಾ, ಅಮರ್ಜಾ ಸೇರಿ 11 ಜಲಾಶಯಗಳಿದ್ದರೂ ರೈತರ ಹೊಲಗಳಿಗೆ ನಿರೀಕ್ಷಿತ ಮಟ್ಟದಲ್ಲಿ ನೀರು ತಲುಪಿಲ್ಲ. ನೀರಾವರಿ ಯೋಜನೆ ಪೂರ್ಣಗೊಳಿಸಲು ಕಾಲಮಿತಿಯೊಳಗೆ ಪೂರ್ಣಗೊಳಿಸಿ ಕಾಲುವೆ ಕೊನೆ ಭಾಗದ ರೈತರಿಗೂ ನೀರು ಸಿಕ್ಕರೆ ಉನ್ನತ್ತರ ಬದುಕು ಹಸನಾಗುತ್ತದೆ.

■ ಕಲ್ಯಾಣ ಕರ್ನಾಟಕ ವಿಜಯೋತ್ಸವ ಹಿನ್ನೆಲೆಯಲ್ಲಿ ಇಡೀ ನಗರ ಸಿಂಗಾರಗೊಂಡಿದೆ.

■ ಕಲಬುರಗಿಯ ಜಗತ್ ವೃತ್ತದಿಂದ ಸರ್ದಾರ್ ವಲ್ಲಭಬಾಯಿ ಪಟೇಲ್ ವೃತ್ತದವರೆಗೆ ಸಿಎಂ, ಡಿಸಿಎಂ ಹಾಗೂ ಗೃಹಸಚಿವರ ಕಟೌಟ್

■ ನಗರದ ಪೊಲೀಸ್ ಪರೇಡ್ ಮೈದಾನದಲ್ಲಿ ಬಿಗಿ ಪೊಲೀಸ್ ಭದ್ರತೆ

■ ವಿವಿಧ ಕಾಮಗಾರಿಗಳ ಫಲಕಗಳು ಸನ್ನದ್ಧ



ಗುರುವಾರ ನಡೆಯುವ ಸಮಾರಂಭಕ್ಕೆ ಕಲಬುರಗಿ ಡಿಎಆರ್ ಮೈದಾನ ಸಿಂಗಾರ ಗೊಂಡಿರುವ ನೋಟ

● ಕಲ್ಯಾಣ ಕರ್ನಾಟಕ ವಿಜಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಿರುವ ಮುಖ್ಯಮಂತ್ರಿಗಳು ರೂ.1300 ಕೋಟಿ ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ. ಕೋವಿಡ್-19 ಆತಂಕ ಹಿನ್ನೆಲೆಯಲ್ಲಿ ಅತ್ಯಂತ ಸರಳವಾಗಿ ಕಾರ್ಯಕ್ರಮ ಆಚರಿಸಲಾಗುತ್ತಿದೆ.

-ದತ್ತಾತ್ರೇಯ ಸಿ.ಪಾಟೀಲ್ ರೇವೂರ್ ಅಧ್ಯಕ್ಷರು, ಕೆಕೆಆರ್‌ಡಿಬಿ ಹಾಗೂ ಶಾಸಕರು